**ದಿ:09-03-2023 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಾನು ಹೇಳಿದ ಪ್ರಕಾರ ಪ್ರಮಾಣೀಕರೆಸಿ ನಿಜ ಇರುತ್ತದೆ.

ದಾವಾ ಸಂಬಂದ ದಾವಾ ಕೂಡ ಸಲ್ಲಿಸಿರುವ ದಾಖಲೆಗಳನ್ನು ನೋಡುತಿದ್ದು ದಿ:16.01.2006 ರ ಪಾಲು ವಿಭಾಗ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದರ ಅಸಲು ದಾಖಲೆ ನನ್ನ ಬಳಿ ಇರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದು ಆದ್ದರಿಂದ ದೃಡೀಕೃತ ನಕಲನ್ನು ನಿಪಿ-1 ಎಂದು ಗುರುತಿಸಲಾಯಿತು. ದಿ:13.03.2015 ರ ನೊಂದಾಯಿತ ಕ್ರಯ ಪತ್ರದ ದೃಡೀಕೃತ ನಕಲು ಹಾಜರುಪಡಿಸಿದ್ದು ಅದರ ಅಸಲು ದಾಖಲೆ ನನ್ನ ಬಳಿ ಇರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದು ಆದ್ದರಿಂದ ದೃಡೀಕೃತ ನಕಲನ್ನು ನಿಪಿ-2 ಎಂದು ಗುರುತಿಸಲಾಯಿತು. ದಿ: 09.01.2013 ರ ದಾನಪತ್ರದ ದೃಡೀಕೃತ ನಕಲು ಹಾಜರುಪಡಿಸಿದ್ದು ಅದರ ಅಸಲು ದಾಖಲೆ ನನ್ನ ಬಳಿ ಇರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದು ಆದ್ದರಿಂದ ದೃಡೀಕೃತ ನಕಲನ್ನು ನಿಪಿ-3 ಎಂದು ಗುರುತಿಸಲಾಯಿತು. ಮತ್ತು ದಿ:15.05.2012 ರ ದಾನಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದರ ಅಸಲು ದಾಖಲೆ ನನ್ನ ಬಳಿ ಇರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದು ಆದ್ದರಿಂದ ದೃಡೀಕೃತ ನಕಲನ್ನು ನಿಪಿ-4 ಎಂದು ಗುರುತಿಸಲಾಯಿತು.

06 ಮ್ಯೂಟೇಶನ್ ರಿಜಿಸ್ಟರ ನ ವಹಿಯ ದೃಡೀಕೃತ ನಕಲು ಹಾಜರುಪಡಿಸಿದ್ದು ನಿಪಿ-5 ರಿಂದ 10 ಎಂದು ಗುರುತಿಸಲಾಯಿತು. ದಾವಾ ಆಸ್ತಿಗಳಿಗೆ ಸಂಬಂದಿಸಿದ 13 ಪಹಣಿ ಪತ್ರಿಕೆಗಳನ್ನು ನಿಪಿ-11 ರಿಂದ 23 ಎಂದು ಕ್ರಮವಾಗಿ ಗುರುತಿಸಲಾಯಿತು

ಆದ್ದರಿಂದ ದಾವಾದಲ್ಲಿ ಕೇಳಿರುವಂತೆ ತೀರ್ಪು ಮತ್ತು ಡಿಕ್ರಿ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀಸವಾಲಿಗೆ ಕಾಲಾವಾಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ